## ಪದಬಂಧ




**ಎಡದಿಂದ ಬಲಕ್ಕೆ:**

1. ಸದಾನಂದನಿಗೆ ಯಾವಾಗಲೂ ಸಮಯದ್ದೇ ಚಿಂತೆ(4)
3. ಅರಮನೆಯಲ್ಲಿದ್ದರೇನು? ನೆಮ್ಮದಿ ಬೇಕಲ್ಲ? (3)
4. ಕರೀಮಣಿ ಮಾರುವ ವ್ಯಾಪಾರಿ ಇವನೇ (3)
6. ನ್ಯಾಯವನ್ನೇ ನೀಡುತ್ತ ಬಂದವರಿಗೆ ಬೆಣ್ಣೆ ಕಾಣಿಕೆ (4)
7. ಮೃತ ದೇಹದಂತೆ ಇದೇನು ಯೋಗ ಭಂಗಿ? (4)
9. ಲಾಭ ತರಿಸುವ ರೀತಿಯನ್ನು ಸರಳಗೊಳಿಸು (4)
12. ಹಣೆಗೆ ಹಣೆ ಘಟ್ಟಿಸಿ ಇದೆಂಥ ಯುದ್ಧ? (4)
14. ಆ ಹೊಂಗನಸಿನ ಅರ್ಥ ತುಂಬ ನಿಗೂಢ (3)
15. ಮರೆತೇ ಹೋಯಿತೇ? ಎಂಥ ಮಳೆಗಾಳಿ! (3)
16. ಹೊಸದಾಗಿ ಕೂರಿಸಲು ತುಂಬ ಸಹಾಯಕ (4)

**ಮೇಲಿಂದ ಕೆಳಕ್ಕೆ:**

1. ಸಂಪಾದಿಸಿ ತಂದದ್ದನ್ನೆಲ್ಲ ಅಮ್ಮನಿಗೇ ಒಪ್ಪಿಸಿದ್ದು (4)
2. ರಾಮನ ಮಕ್ಕಳಿಗೆ ಹೋಲಿಕೆ ಅಲ್ಪ ಸ್ವಲ್ಪ, ಅಷ್ಟೆ (4)
3. ಅವಸರದಲ್ಲಿ ತಯಾರಾದದ್ದು ಈ ಕಷಾಯ (3)
5. ಸಕಲ ವಿಧಿಗಳಲ್ಲೂ ಅಗತ್ಯ ಪವಿತ್ರ ಕೊಡ (3)
6. ನಮ್ಮದೆಂದು ತೋರಿಸಿದ್ದನ್ನೆಲ್ಲ ದಾಖಲು ಮಾಡು (4)
8. ರಾಜನೇ ಹೋಗಿ ರಾಣಿಗೆ ಒಪ್ಪಿಸಿದ ಗೌರವ ಕಾಣಿಕೆ (4)
10. ಓಲಗದವನ ಬಾಯಲ್ಲಿ ಖಾರದ ಸುವಾಸನಾ ಸಾಂಬಾರ (3)
11. ಎಲ್ಲರನ್ನೂ ಸುಮ್ಮನಾಗಿಸಿದ ಒಳ್ಳೆಯ ಮನಸ್ಸಿನ ವ್ಯಕ್ತಿ (4)
12. ಹರಟೆ ಹೊಡೆಯಲು ಹಿಡಿದ ಪಟ್ಟು ಬಿಡದಾಕೆ (4)
13. ಹತ್ತಿರ ಹೋಗಲೇಬೇಡಿ. ಅದು ವಿಪರೀತ ಚೂಪು (3)

### 10-7-14ರ ಉತ್ತರಗಳು

ಎಡದಿಂದ ಬಲಕ್ಕೆ:

1. ವರಕವಿ; 3. ಸಾಕ್ಷರ; 4. ವಜನು; 6. ದಿವಾಕರ; 7. ಮಕರ; 9. ಉಸುಕು; 11. ತ್ವರಿತ; 13. ನಕಾರ; 15. ಹಂಸಪಕ್ಷಿ; 17. ಪುನೀತ; 18. ಪಟಿಂಗ; 19. ಕರೀಮಣಿ.

ಮೇಲಿಂದ ಕೆಳಕ್ಕೆ:

1. ವರದಿ; 2. ವಿವರ; 3. ಸಾಧಕ; 5. ನುಡಿಸು; 7. ಮಹತ್ವ; 8. ರಚಿತ; 9. ಉತ್ಥಾನ; 10. ಕುಬೇರ; 12. ರಿಕಾಪು; 14. ಕಾಳಗ; 15. ಹಂತಕ; 16. ಕ್ಷಿಪಣಿ.

## ಪ್ರಶ್ನಾಂಕಣ

# ಅಮೆರಿಕನ್ ಪಿರಮಿಡ್-ಏನು ವಿಶೇಷ?

ಪಿರಮಿಡ್ ಎಂದೊಡನೆ ಮೊದಲಿಗೆ ನೆನಪಾಗುವ ಈಜಿಪ್ಟ್‌ನ ಗೋರಿ ಪಿರಮಿಡ್‌ಗಳಿಂದ (ಚಿತ್ರ-1) ಗೋಪುರಾಕಾರ ಬಿಟ್ಟು ಉಳಿದೆಲ್ಲ ವಿಧಗಳಲ್ಲೂ ಎಂದರೆ ನೆಲೆ, ಸಂಖ್ಯೆ, ಕಾಲ, ಸ್ವರೂಪ, ವಿಸ್ತಾರ, ಉದ್ದೇಶ ಇತ್ಯಾದಿ ಪ್ರತಿಯೊಂದರಲ್ಲೂ ಸಂಪೂರ್ಣ ವಿಭಿನ್ನವಾಗಿರುವುದೇ ಅಮೆರಿಕನ್ ಪಿರಮಿಡ್‌ಗಳ ವಿಶೇಷ.

ಅಮೆರಿಕನ್ ಪಿರಮಿಡ್‌ಗಳ ನೆಲೆ ಮಧ್ಯ ಅಮೆರಿಕ. ಅಲ್ಲೂ ವಿಶೇಷವಾಗಿ ಮೆಕ್ಸಿಕೋ, ಗ್ವಾಟೆಮಾಲಾ ಮತ್ತು ಹಾಂಡುರಾಸ್‌ಗಳಲ್ಲಿ ಅವುಗಳದು ಗರಿಷ್ಠ ಸಂಖ್ಯೆ. ಈ ಪ್ರದೇಶಗಳ ದಟ್ಟಡವಿಗಳಲ್ಲಿ ಅಲ್ಲಲ್ಲಿ ಅಲ್ಲಲ್ಲಿ ಪತ್ತೆಯಾಗಿರುವ ಬೃಹದಾಕಾರದ ಈ ಗೋಪುರಾಕೃತಿಗಳ ಸಂಖ್ಯೆ ಒಂದು ಲಕ್ಷಕ್ಕೂ ಅಧಿಕ! ಇವೆಲ್ಲ ಪಿರಮಿಡ್‌ಗಳದೂ ಬಹು ಅಂತಸ್ತುಗಳ ವಿನ್ಯಾಸ; ಶಿಖರದಲ್ಲೊಂದು ವಿಶಾಲ ವೇದಿಕೆ; ಅಲ್ಲಿಗೆ ತಲುಪಲು ಮೆಟ್ಟಿಲು ಮಾರ್ಗ (ಚಿತ್ರ-2).

ಕ್ರಿಸ್ತಪೂರ್ವ 400 ರಿಂದ ಕ್ರಿಸ್ತಶಕ 1500 ರವರೆಗಿನ ಸುಮಾರು ಎರಡು ಸಾವಿರ ವರ್ಷಗಳ ಅವಧಿಯಲ್ಲಿ ಮಧ್ಯ ಅಮೆರಿಕದಲ್ಲಿ ನೆಲಸಿದ್ದ ಜಾಪೊಟೆಕ್, ಟಾಲ್ಟೆಕ್, ಮಾಯನ್ ಮತ್ತು ಎಜ್ಟೆಟೆಕ್ ನಾಗರಿಕತೆಗಳ ಜನ ನಿರ್ಮಿಸಿದ ಈ ಪಿರಮಿಡ್‌ಗಳದು ಧಾರ್ಮಿಕ ಉದ್ದೇಶ. ಯಾವ ಆಧುನಿಕ ಸಾಧನ ಸಲಕರಣೆಗಳೂ ಇರದಿದ್ದ ಆ ಪ್ರಾಚೀನ ಕಾಲದಲ್ಲಿ ಟನ್‌ಗಳಷ್ಟು ಭಾರದ ಬಂಡೆಗಳನ್ನು ಕಲ್ಲಿನ ಉಳಿಗಳಿಂದ ಕತ್ತರಿಸಿ, ಮರಳಿನಿಂದ ಉಜ್ಜಿ ನಯಗೊಳಿಸಿ, ನಾರುಗಳ ಹಗ್ಗದಿಂದ ಎಳೆದು ಸಾಗಿಸಿ ಜೋಡಣೆಗೊಳಿಸಿರುವ ಈ ಪರಮ ವಿಸ್ಮಯದ ನಿರ್ಮಾಣಗಳು ದೇವರುಗಳಿಗೆ ಆದಷ್ಟೂ ಸನಿಹ ಹೋಗಿ ನೈವೇದ್ಯ ಸಮರ್ಪಿಸಲು, ಕೃತಜ್ಞತೆ ಸೂಚಿಸಲು ಕಟ್ಟಲಾದ 'ನರಬಲಿ ಪೀಡ'ಗಳಾಗಿದ್ದುವು!







ವಾಸ್ತವ ಏನೆಂದರೆ, ಮಧ್ಯ ಅಮೆರಿಕದ ಪ್ರಾಚೀನ ನಾಗರಿಕತೆಗಳ ಮುಗ್ಧ ಜನರಿಗೆ ಅವರ ಧಾರ್ಮಿಕ ಮುಂದಾಳುಗಳು ಬೋಧಿಸುತ್ತಿದ್ದ 'ಧರ್ಮ'ದ ಪ್ರಕಾರ ಸುಭಿಕ್ಷಕ್ಕಾಗಿ, ಸಮಾಜದ ಸ್ವಾಸ್ಥ್ಯಕ್ಕಾಗಿ ಅವರ ದೇವರುಗಳನ್ನು ಸದಾ ಸಂತೃಪ್ತರಾಗಿರಿಸಬೇಕಿತ್ತು. ಅದಕ್ಕಾಗಿ ಮುಗಿಲ ಕಡೆಗೆ ಆದಷ್ಟೂ ಸನಿಹ ಹೋಗಿ 'ನರಬಲಿ' ಸಮರ್ಪಿಸಬೇಕಿತ್ತು. 'ಧರ್ಮ ಗುರು'ಗಳು ಆಯ್ದುಕೊಂಡ ಮಕ್ಕಳನ್ನು ಯುವಕರನ್ನು ಬಲಿಕೊಡಲು ಒಪ್ಪಿಸಬೇಕಿತ್ತು. ಮಳೆ ಬಂದರೆ, ಉತ್ತಮ ಬೆಳೆ ದೊರೆತರೆ, ಯುದ್ಧದಲ್ಲಿ ಗೆದ್ದರೆ... ಹಾಗೆ ಒಂದೊಂದಕ್ಕೂ ಪಿರಮಿಡ್ ನಿರ್ಮಾಣ, ನರಬಲಿ ಸಮರ್ಪಣೆ ಅಲ್ಲಿ ನಡೆದಿತ್ತು. ಆದರೆ ಹಾಗೆಲ್ಲ ಮಾಡಿದರೂ ಬರ-ಮಹಾಪೂರಗಳು ಬಂದಾಗ, ರೋಗ ರುಜಿನಗಳು ತಾಂಡವವಾಡಿದಾಗ ಜನ ರೊಚ್ಚಿಗೆದ್ದರು. ಧಾರ್ಮಿಕ ಮುಖಂಡರನ್ನು ಕೊಚ್ಚಿಹಾಕಿ, ಪಂಗಡಗಳಾಗಿ ಒಡೆದು ಬಡಿದಾಡಿ ನಿರ್ನಾಮವಾದರು. ಮೂಢನಂಬಿಕೆಗಳನ್ನು ಬೋಧಿಸಿ ಮುಗ್ಧಜನರನ್ನು ಆಳಲು ಹೋದರೆ ಸಂಭವಿಸುವ ಸರ್ವನಾಶದ ಪರಿಣಾಮಕ್ಕೆ ಅಮೆರಿಕನ್ ಪಿರಮಿಡ್‌ಗಳು ಸಾಕ್ಷಿಯಾಗಿ ನಿಂತಿವೆ. ಅದೇ ಅವುಗಳ ಪರಮ ವಿಶೇಷ.

■ ಎನ್. ವಾಸುದೇವ್